APRIL 25, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಮಲೈ ಮಹದೇಶ್ವರ ಬೆಟ್ಟದಲ್ಲಿ, ವಿಶೇಷ ಸಚಿವ ಸಂಪುಟ ಸಭೆ; ಪಹಲ್ಗಾಮ್ ಭಯೋತ್ಪಾದಕ ದಾಳಿ ವಿರುದ್ಧ, ಖಂಡನಾ ನಿರ್ಣಯ.**
- **ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ; ಆಡಳಿತ ಮತ್ತು ಅಧಿಕಾರ ವಿಕೇಂದ್ರೀಕರಣದ ಮಹತ್ವ ಕುರಿತು, ಚಿಂತನ–ಮಂಥನ.**
- **ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ವಿದುರಾಶ್ವತ್ಥದಲ್ಲಿ ಇಂದು, 87ನೇ ಬಲಿದಾನ ದಿನದ ಸ್ಮರಣೆ.**
- **ಇಂದು, ವಿಶ್ವ ಮಲೇರಿಯಾ ಜಾಗ್ರತಿ ದಿನ.**

<><><>

**ಈಗ ವಾರ್ತೆಗಳ ವಿವರ**

<><><>

**ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ, ಭಯೋತ್ಪಾದಕ ದಾಳಿಯನ್ನು ಖಂಡಿಸಿ, ಚಾಮರಾಜನಗರ ಜಿಲ್ಲೆ, ಮಲೈ ಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಿದ್ದ, ವಿಶೇಷ ಸಚಿವ ಸಂಪುಟ ಸಭೆ, ಖಂಡನಾ ನಿರ್ಣಯ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿದ್ದಾರೆ. ಉಗ್ರರ ದಾಳಿ, ಮನುಷ್ಯ ಕುಲದ ಮೇಲೆ ನಡೆಸುತ್ತಿರುವ ಭೀಬತ್ಸ ಕೃತ್ಯ. ಈ ಘಟನೆಗೆ ಕಾರಣವಾದ, ವೈಫಲ್ಯಗಳ ಕುರಿತು ಸಮರ್ಪಕ ತನಿಖೆ ನಡೆಸಬೇಕು ಎಂದು, ಸಭೆ ಆಗ್ರಹಿಸಿದೆ.**

<><><>

**ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಭಯೋತ್ಪಾದಕರ ಕುಕೃತ್ಯವನ್ನು ಹಾಸನದಲ್ಲಿ ಖಂಡಿಸಿ, ಮೃತಪಟ್ಟ ಹಾಗೂ ಗಾಯಗೊಂಡ ಎಲ್ಲರಿಗೂ, ಇಡೀ ದೇಶ ಮಿಡಿಯುತ್ತಿದೆ, ಎಂದರು.**

<><><>

**ಉತ್ತರಪ್ರದೇಶ, ವಾರಾಣಸಿ ಕಾಶಿ ಜ್ಞಾನ ಪೀಠದ, ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಉಗ್ರರ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸಿ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.**

<><><>

ಕಾಶ್ಮೀರದ ಪಹಲ್ಗಾಮ್‌ನಲ್ಲಿ, ಪ್ರವಾಸಿಗರನ್ನು ಗುರಿಯಾಗಿರಿಸಿ ನಡೆದ, ಭಯೋತ್ಪಾದಕರ ದಾಳಿ ಬಳಿಕ, 178 ಜನ ರಾಜ್ಯದ ಪ್ರವಾಸಿಗರೊಂದಿಗೆ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್, ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ, ಸಚಿವ ಲಾಡ ಅವರು, ಶ್ರೀನಗರ ವಿಮಾನ ನಿಲ್ದಾಣದಿಂದ, ರಾಜ್ಯದ ಎಲ್ಲರನ್ನೂ ಜೋಪಾನವಾಗಿ ಕರೆತಂದಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಚಾಮರಾಜನಗರ ಜಿಲ್ಲೆ, ಮಲೈ ಮಹದೇಶ್ವರ ಬೆಟ್ಟದಲ್ಲಿ ನಡೆದ, ವಿಶೇಷ ಸಚಿವ ಸಂಪುಟ ಸಭೆಯಲ್ಲಿ, 82ಕ್ಕೂ ಹೆಚ್ಚು ಮಹತ್ವದ ವಿ ’ಯಗಳ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಮೈಸೂರು ಕಂದಾಯ ವಿಭಾಗದ ಅಭಿವೃದ್ಧಿ ಒಳಗೊಂಡು, 3 ಸಾವಿರದ 647 ಕೋಟಿ ರೂಪಾಯಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನಿಡಲಾಗಿದೆ ಎಂದರು. ಸ್ಥಳೀಯ ಸಮಸ್ಯೆಗಳು ಸೇರಿ, ರಾಜ್ಯದ ಸಮಗ್ರ ಅಭಿವೃದ್ಧಿ, ಸಭೆಯ ಮುಖ್ಯ ಉದ್ದೇಶವಾಗಿತ್ತು ಎಂದು ಡಿ.ಕೆ.ಶಿವಕುಮಾರ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

ಬೆಳಗಾವಿ ವಿಭಾಗದ ಸಂಪುಟ ಸಭೆ ವಿಜಯಪುರದಲ್ಲಿ ಹಾಗೂ ಬೆಂಗಳೂರು ವಿಭಾಗದ ಸಭೆ, ನಂದಿ ಬೆಟ್ಟದಲ್ಲಿ ನಡೆಯಲಿದೆ.

<><><>

ಬಿಹಾರದ ಮಧುಬನಿಯಲ್ಲಿ ಆಯೋಜಿತ, ರಾಷ್ಟ್ರೀಯ ಪಂಚಾಯತ್ ರಾಜ್ ದಿನದ ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಪಾಲ್ಗೊಂಡು, ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗೆ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ದಾಳಿ ನಡೆಸಿದ ಭಯೋತ್ಪಾದಕರಿಗೆ ಮತ್ತು ದಾಳಿಯ ಸಂಚು ರೂಪಿಸಿದವರಿಗೆ, ಅವರ ಕಲ್ಪನೆಗೂ ಮೀರಿದ ಶಿಕ್ಷೆಯಾಗಲಿದೆ. ಭಾರತದಿಂದ ಭಯೋತ್ಪಾದನೆ ಮೂಲೋತ್ಪಾಟನೆ ಸನ್ನಿಹಿತ, ಎಂದರು.

<><><>

1992 ರಲ್ಲಿ, ಭಾರತೀಯ ಸಂವಿಧಾನಕ್ಕೆ ತರಲಾದ, 73ನೇ ತಿದ್ದುಪಡಿ ಅನ್ವಯ, 1993ರ ಏಪ್ರಿಲ್ 24ರಂದು, ಪಂಚಾಯತ್‌ರಾಜ್ ಕಾಯ್ದೆ ಅನುಷ್ಠಾನಗೊಂಡು, ಗ್ರಾಮೀಣಾಭಿವೃದ್ಧಿಯಲ್ಲಿ, ವಿಶೇಷ ಶಕೆಯೊಂದನ್ನು ಆರಂಭಿಸಿತು.

<><><>

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭುವನೇಶ ಪಾಟೀಲ.

<><><>

ಸಿ.ಇ.ಓ. ಭುವನೇಶ ಪಾಟೀಲ ಧ್ವನಿ 60 ಸೆಕೆಂದುಗಳು

<><><>

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಾಪೂಜಿ ಸೇವಾ ಕೇಂದ್ರದ ಮೂಲಕ, ಗ್ರಾಮೀಣ ಭಾಗದಲ್ಲಿ, 81 ಸರ್ಕಾರಿ ಸೇವೆಗಳನ್ನು, ಜನರ ಮನೆ ಬಾಗಿಲಿಗೆ ಒದಗಿಸುತ್ತಿದೆ ಎಂದು, ಸಚಿವ ಪ್ರಿಯಾಂಕ್ ಖರ್ಗೆ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಆಡಳಿತ ಮತ್ತು ಅಧಿಕಾರ ವಿಕೇಂದ್ರೀಕರಣದ ಮಹತ್ವ ಕುರಿತು, ಚಿಂತನ–ಮಂಥನ ನಡೆದ ವರದಿಗಳು ಬಂದಿವೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ವಿದುರಾಶ್ವತ್ಥದ ಸ್ವಾತಂತ್ರ್ಯ ಸ್ಮಾರಕ ಉದ್ಯಾನವನದ ಮುಂಭಾಗದಲ್ಲಿ ಇಂದು, **87**ನೇ ಬಲಿದಾನ ಸ್ಮರಣೆಯನ್ನು, ಸ್ವಾತಂತ್ರ್ಯ ಸ್ಮಾರಕ ಅಭಿವೃದ್ಧಿ ಸಮಿತಿ ಆಯೋಜಿಸಿದೆ. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ, ವಿದುರಾಶ್ವತ್ಥವನ್ನು ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಗುರುತಿಸಲಾಗುತ್ತದೆ. **1938** ಏಪ್ರಿಲ್ **25** ರಂದು ಬ್ರಿಟಿ ’ರ ವಿರುದ್ಧ ನಡೆದ ಹೋರಾಟದಲ್ಲಿ, ಪೊಲೀಸರು ನಡೆಸಿದ ಗೋಲಿಬಾರ್ ನಲ್ಲಿ, **38** ದೇಶಪ್ರೇಮಿಗಳು ಬಲಿಯಾಗಿ, **148** ಸ್ವಾತಂತ್ರ್ಯ ಸೇನಾನಿಗಳು ಗಾಯಗೊಂಡರು. ಅವರ ತ್ಯಾಗ, ಬಲಿದಾನವನ್ನು ಸ್ಮರಿಸಿ, ಇಂದು ಶ್ರದ್ಧಾ ಸುಮನ ಅರ್ಪಿಸಲಾಗುತ್ತಿದೆ.

<><><>

‘ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳಲಿದೆ: ಮರುಹೂಡಿಕೆ ಮಾಡಿ, ಮರುಕಲ್ಪಿಸಿಕೊಳ್ಳಿ, ಪುನಃ ದೈದೀಪ್ಯರಾಗಿ’ ಎಂಬ ಧ್ಯೇಯದೊಂದಿಗೆ, ವಿಶ್ವ ಮಲೇರಿಯಾ ಜಾಗ್ರತಿ ದಿನವನ್ನು, ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ಮಲೇರಿಯಾ, ಪ್ಲಾಸ್ಮೋಡಿಯಂ ಪರಾವಲಂಬಿಯಿಂದ ಉಂಟಾಗುವ, ಮಾರಕ ಕಾಯಿಲೆ. ಸೋಂಕಿತ ಅನಾಫಿಲಿಸ್ ಸೊಳ್ಳೆಗಳ ಕಡಿತದ ಮೂಲಕ, ಮನು ’ರಿಗೆ ಹರಡುತ್ತದೆ. ಮಲೇರಿಯಾ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ, ನಿರಂತರ ಹೂಡಿಕೆ ಮತ್ತು ಬದ್ಧತೆಯ ಅಗತ್ಯವನ್ನು ಒತ್ತಿ ಹೇಳುವ, ಮಲೇರಿಯಾದ ಮಾರಕ ಪರಿಣಾಮಗಳ ಬಗ್ಗೆ ಜಾಗೃತಿ, ನಿರ್ಮೂಲನೆಗೆ ಯೋಜಿತ ಪ್ರಯತ್ನ, ಈ ದಿನಾಚರಣೆ ಮಹತ್ವವಾಗಿದೆ ಎಂದು, ವಿಶ್ವ ಆರೋಗ್ಯ ಸಂಸ್ಥೆ ಪ್ರಕಟಿಸಿದೆ.

<><><>

ರಾಯಚೂರು, ಯಾದಗಿರಿ, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ, ಅಧಿಕ ಪ್ರಮಾಣದಲ್ಲಿ ಮೆಣಸಿನಕಾಯಿ ಬೆಳೆಯಲಾಗಿದ್ದು, ಬೆಂಬಲ ಬೆಲೆ ಯೋಜನೆ ಅಡಿ ಖರೀದಿಸಿ, ರೈತರ ಹಿತ ಕಾಯುವಂತೆ, ರಾಯಚೂರು ಸಂಸದ ಜಿ. ಕುಮಾರ ನಾಯಕ್, ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಕೇಂದ್ರ ಕೃಷಿ ಇಲಾಖೆ ಕಾರ್ಯದರ್ಶಿ, ದೇವೇಶ್ ಚತುರ್ವೇದಿ ಅವರನ್ನು ಹೊಸ ದಿಲ್ಲಿಯಲ್ಲಿ ಭೇಟಿ ಮಾಡಿ, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಮೆಣಸಿನಕಾಯಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂಸದರು ವಿವರಿಸಿದರು.

<><><>

‘ಕಾಕ್ಲಿಯರ ಇಂಪ್ಲಾಂಟೇಶನ್ ನಲ್ಲಿ, ಇತ್ತೀಚಿನ ಪ್ರಗತಿ; ಶಸ್ತ್ರಚಿಕಿತ್ಸೆಯಿಂದ ಧ್ವನಿ ಮತ್ತು ಅದರಾಚೆಗೆ’ ಎಂಬ ವಿ ’ಯ ಕುರಿತು, ಇಂದಿನಿಂದ ಎರಡು ದಿನಗಳ ವಿಶೇಷ ಕಾರ್ಯಾಗಾರ, ಧಾರವಾಡದಲ್ಲಿ ಆಯೋಜಿತವಾಗಿದೆ. ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಪೀಠ, ಧಾರವಾಡದ ಜೆ.ಎಸ್.ಎಸ್. ವಾಕ್ ಮತ್ತು ಶ್ರವಣ ವಿದ್ಯಾಸಂಸ್ಥೆ ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಕಾರ್ಯಾಗಾರ ಆಯೋಜಿಸಿದ್ದು, ಇಂದು ಬೆಳಗ್ಗೆ **10** ಗಂಟೆಗೆ, ಖ್ಯಾತ ಮನೋ ಆರೋಗ್ಯ ತಜ್ಞ, ಆನಂದ ಪಾಂಡುರಂಗಿ ಉದ್ಘಾಟಿಸುವರು.

<><><>

ವಿಜಯಪುರ ಜಿಲ್ಲೆ, ತಿಕೋಟಾ ತಾಲೂಕು, ಬಾಬಾನಗರದ ಎಂ.ಡಿ. ಪೈಗಂಬರ್ ಗೌಂಡಿ, ಅತ್ಯುತ್ತಮ ಉತ್ತಮ ಓಟಗಾರರು. 2026ರ ಏಷ್ಯಾ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು, ಸಿದ್ಧತೆ ನಡೆಸಿದ್ದಾರೆ. ವಿಜಯಪುರದ ಲಿಂಗಾಯತ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಅಸೋಸಿಯೇಷನ್ – ಬಿ.ಎಲ್.ಡಿ.ಇ. ಕ್ರೀಡಾಪಟುವಿನ ತರಬೇತಿಯ ಒಟ್ಟು ಖರ್ಚು, 4 ಲಕ್ಷ 60 ಸಾವಿರ ರೂಪಾಯಿ ಭರಿಸಲು, ಮುಂದಾಗಿದೆ.

<><><>

ವಿಧಾನ ಪರಿಷತ್ ಸದಸ್ಯ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಸುನೀಲಗೌಡ ಪಾಟೀಲ ಧ್ವನಿ 42 ಸೆಕೆಂದುಗಳು

<><><>

ಐ.ಪಿ.ಎಲ್., ಇಂಡಿಯನ್ ಪ್ರೀಮಿಯರ್ ಲೀಗ್, ಟಿ–20 ಕ್ರಿಕೆಟ್ ಪಂದ್ಯ ಸರಣಿಯ, ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿತ ಪಂದ್ಯದಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ರಾಜಸ್ಥಾನ ರಾಯಲ್ಸ್ ತಂಡವನ್ನು 11 ರನ್‌ಗಳಿಂದ ಪರಾಭವಗೊಳಿಸಿತು. ಟಾಸ್ ಸೋತು, ಮೊದಲು ಬ್ಯಾಟಿಂಗ್ ಮಾಡಿದ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 205 ರನ್‌ಗಳನ್ನು ಗಳಿಸಿತು. ರಾಜಸ್ಥಾನ ರಾಯಲ್ಸ್ ತಂಡ, 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ, 194 ರನ್ ಗಳಿಸಿ, ಪರಾಭವಗೊಂಡಿತು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಡಿದ್ದು ಭಾನುವಾರ, 27 ರಂದು, ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 121ನೇ ಸಂಚಿಕೆಯಾಗಿದೆ. ಟೋಲ್–ಫ್ರೀ ಸಂಖ್ಯೆ 1800–11–7800 ಅಥವಾ ಮೋದಿ ಅಪ್ಲಿಕೇಶನ್ ಅಥವಾ ಮೈ ಗಾವ್ ಓಪನ್ ಫೋರಂ ಮೂಲಕ, ಜನತೆ ಆನ್‌ಲೈನ್‌ನಲ್ಲಿ, ಇಂದು ಮಧ್ಯ ರಾತ್ರಿ ವರೆಗೆ, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಕ್ಕಳನ್ನು ಧಡಾರ ಹಾಗೂ ರುಬೆಲ್ಲಾ ರೋಗದಿಂದ ರಕ್ಷಿಸುವ, ವಿಶೇ ’ ಲಸಿಕಾ ಅಭಿಯಾನ ಆರಂಭವಾಗಿದೆ ಎಂದು, ರಾಜ್ಯ ಆರೋಗ್ಯ ಇಲಾಖೆ, ತಿಳಿಸಿದೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಜೋಗ ಜಲಪಾತದ ವೀಕ್ಷಣೆಗೆ, ಮೇ 1 ರಿಂದ ಪ್ರವಾಸಿಗರಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

<><><>

ನೂತನ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ವಿಧೇಯಕ ಅಂಗೀಕರಿಸಿದ್ದಕ್ಕಾಗಿ, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಅಭಿನಂದಿಸಿದ್ದಾರೆ.

<><><>

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕಿನ ಖಾಸಗಿ ವಸತಿ ಶಾಲೆಯಲ್ಲಿದ್ದ, ಮೇಘಾಲಯದ 22 ಮಕ್ಕಳನ್ನು, ಜಿಲ್ಲಾಡಳಿತದ ಅಧಿಕಾರಿಗಳು, ಮೇಘಾಲಯಕ್ಕೆ ತೆರಳಿ, ಪೋಷಕರಿಗೆ ಹಸ್ತಾಂತರಿಸಿದ್ದಾರೆ.

<><><>

ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ, 7ನೇ ಸುತ್ತಿನ ಕಾಲು, ಬಾಯಿ ಜ್ವರ ಲಸಿಕಾ ಕಾರ್ಯಕ್ರಮದಡಿ, ಉತ್ತರಕನ್ನಡ ಜಿಲ್ಲೆಯಲ್ಲಿ, 3 ಲಕ್ಷ 40 ಸಾವಿರದ 55 ಜಾನುವಾರುಗಳಿಗೆ ಪ್ರತಿಬಂಧಕ ಲಸಿಕೆ ಹಾಕುವ ಗುರಿ ನಿಗದಿಯಾಗಿದೆ.

<><><>

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಏಕ ಸದಸ್ಯ ಆಯೋಗ, ಮೇ 5 ರಿಂದ, 12 ದಿನಗಳ ಕಾಲ, ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ, ಪರಿಶಿ ್ಟ ಜಾತಿಯ ಒಳ ಮೀಸಲಾತಿ ಕುರಿತು, ಸಮೀಕ್ಷೆ ನಡೆಸಲಿದೆ.

<><><>

ಬೆಳಗಾವಿ ಜಿಲ್ಲೆ ಕಾಗವಾಡದ, ಶಿವಾನಂದ ಮಹಾವಿದ್ಯಾಲಯದಲ್ಲಿ, ಗಡಿ ನಾಡಿನ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ, ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಲೈ ಮಹದೇಶ್ವರ ಬೆಟ್ಟದಲ್ಲಿ, ವಿಶೇ ' ಸಚಿವ ಸಂಪುಟ ಸಭೆ; ಪಹಲ್ಗಾಮ್ ಭಯೋತ್ಪಾದಕ ದಾಳಿ ವಿರುದ್ಧ, ಖಂಡನಾ ನಿರ್ಣಯ.
- ಪಂಚಾಯತ್ ರಾಜ್ ದಿನಾಚರಣೆ; ಆಡಳಿತ ಮತ್ತು ಅಧಿಕಾರ ವಿಕೇಂದ್ರೀಕರಣದ ಮಹತ್ವ ಕುರಿತು, ಚಿಂತನ–ಮಂಥನ.
- ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ವಿದುರಾಶ್ವತ್ಥದಲ್ಲಿ ಇಂದು, 87ನೇ ಬಲಿದಾನ ದಿನದ ಸ್ಮರಣೆ.
- ಇಂದು, ವಿಶ್ವ ಮಲೇರಿಯಾ ಜಾಗ್ರತಿ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.